


ಎಡದಿಂದ ಬಲಕ್ಕೆ:

1. ಅಮ್ಮನ ಬಗ್ಗೆ ಅಬ್ಬ, ಎಂಥ ಗೌರವ, ಪ್ರೀತಿ! 4
3. ದೈವಾರಾಧನೆಗೂ ಅಲ್ಲಿ ಭಾರೀ ಪ್ರತಿಭಟನೆಯೇ? 3
4. ಕೇಡಿನ ಪ್ರಮಾಣವನ್ನು ಕೇಳಿದರೇ ಸಾಕು, ಗಡ ಗಡ 3
6. ಸುಂದರ ಸಭಾಭವನದ ವಿನ್ಯಾಸಕ್ಕಾಗಿ ಈ ಗೌರವಧನ 4
8. ಬಳಕೆಯಾಗದೆ ಉಳಿದುಹೋಯಿತು, ನಾಲ್ಕರ ಒಂದಂಶ 4
10. ಪರಿಭ್ರಮಿಸುತ್ತ ಇದ್ದಾಗಲೇ ಹರಿದು ಬಂತು ನೋಡಿ ಒಳ್ಳೆಯ ಬೆಳಗು 4
12. ವೀರ ಕರ್ಣ ಧರಿಸಿದ್ದ ವಸ್ತ್ರ ನೆತ್ತರಿನ ಬಣ್ಣದ್ದು ಹೌದೇ? 4
16. ನಗರ ಪಾಲಿಕೆಯ ಕಾರ್ಯಗಳ ಜೊತೆಗೇ ಸದಾ ಒಂದಿಲ್ಲ ಒಂದು ಜಗಳ! 3
17. ವಿದ್ಯೆಯನ್ನು ಕಲಿಸುವ ರೀತಿಯೇ ಹಿಂದುಮುಂದಾಯಿತೇ? 3
18. ತೋರಿಸಿದ್ದನ್ನೆಲ್ಲ ಕೊಳ್ಳಬಹುದಾದಂತಹ ಶ್ರೀಮಂತಿಕೆ 4

ಮೇಲಿಂದ ಕೆಳಕ್ಕೆ:

1. ಧರ್ಮಾಂಧನಾದವ ಯಾರೇ ಆದರೂ ಕೀಳು ಮನುಷ್ಯನೇ ತಾನೇ? 3
2. ವೈರಿಗಳನ್ನು ಸುಮ್ಮನಾಗಿಸುವ ಕನಸು ದಿಟವಾಯಿತು 3
3. ವ್ಯಾಪಾರವನ್ನೆಲ್ಲ ಹಾಳುಮಾಡಿದಂತಹ ಭಾರೀ ಉಪದ್ರವ 3
5. ಕಂಡುಹಿಡಿಯಲು ಕಿಂಚಿತ್ತೂ ಕಷ್ಟ ಇಲ್ಲ ಅದು ಸಮುದ್ರ 3
6. ಸಂದೇಶ ಕಳುಹಿಸುತ್ತಲೇ ಇರುವವರನ್ನು ಸಂಶಯದಿಂದ ನೋಡು 4
7. ಯಾರೀತ ಗೊತ್ತಾ? ಪಕ್ಕದ ಮನೆಯವನು 4
8. ಬಾಕಿ ಇರುವುದನ್ನೆಲ್ಲ ವಸೂಲಿ ಮಾಡುವುದೇ ಆತನ ಭಾರೀ ತೂಕದ ಕೆಲಸ 4
9. ಕಾರಣ ಏನೇ ಇರಲಿ, ಇದು 'ಆನೆ ಕಿವಿ'ಯಂಥ ಚರ್ಮರೋಗ 4
11. ಕವಿಯ ಭಾವ ತಿಳಿದಾಗಲೆಲ್ಲ ಹೃದಯ ಕರಗುವ ವ್ಯಕ್ತಿ ಆತ 3
13. ಪಕ್ಷದ ವಕ್ತಾರನಾಗಿದ್ದವ ಬೇಸತ್ತು ಹಿಮ್ಮುಖ ವಿರಾಗಿಯಾದ 3
14. ಸಂತಾಪ ಎದುರಿಸಿ ಎದುರಿಸಿ ಕಡೆಗೆ ತಪಸ್ವಿನಿಯಾದಳೇ? 3
15. ಕೊನೆಯನ್ನೇ ಕಾಣಲಾಗದಂತಹ ದಟ್ಟ ಅರಣ್ಯ 3

---

## 03–09–2020 ಉತ್ತರಗಳು

ಎಡದಿಂದ ಬಲಕ್ಕೆ:

1. ಅಪಾರ 3. ಸಂಕಷ್ಟ 4. ವಾಡಿಕೆ 6. ಕಲ್ಮನೆ 7. ಅನುನಯ 9. ಚಕಮಕಿ 11. ನವಗಾನ 13. ದಿವಸ್ಪತಿ 15. ವಿಷಾದ 17. ಭವನ 18. ಮಜ್ಜನ 19. ಯಮುನ

ಮೇಲಿಂದ ಕೆಳಕ್ಕೆ:

1. ಅಷ್ಟಕ 2. ರವಾನೆ 3. ಸಂಧಾನ 5. ಕೆಡುಕ 7. ಅಭಿಧಾನ 8. ಯಜಮಾನ 9. ಚಲವಾದಿ 10. ಕಿಬೋರುತಿ (=ತಿರುಬೋಕಿ ತಲೆಕೆಳಗು) 12. ಗಾರ್ದಭ 14. ವಸನ 15. ವಿನಯ 16. ದಮನ

ಪ್ರಶ್ನಾಂಕಣ

# ಕಾಂತ ಗೋಳ: ಏನೇನು ಮಹತ್ವ?

ಕಾಂತ ಗೋಳ ಅದು ನಮ್ಮ ಪೃಥ್ವಿಯನ್ನು ಪರಿವರಿಸಿರುವ ಒಂದು ರಕ್ಷಣಾ ಕವಚ. ಧರೆಯ 'ಕಾಂತ ಕ್ಷೇತ್ರ' (ಚಿತ್ರ3) ದಿಂದ ರೂಪುಗೊಂಡಿರುವ ಈ ಅದ್ಭುತ, ಅಗೋಚರ ಕವಚ ಭೂ ನೆಲದಿಂದ ಹೊರಕ್ಕೆ 60,000 ಕಿ.ಮೀ ದೂರದವರೆಗೂ ಹರಡಿದೆ. ಭೂ ಕಾಂತ ಗೋಳದ್ದು ವಾಸ್ತವವಾಗಿ 'ಗೋಳ'ದ ಆಕಾರ ಅಲ್ಲ; ಸೂರ್ಯನಿಗೆ ಎದುರಾದ ಭಾಗ ಒತ್ತಲ್ಪಟ್ಟು, ಅದಕ್ಕೆ ವಿರುದ್ಧವಾದ ಭಾಗ ಉದ್ದವಾಗಿ ಚಾಚಲ್ಪಟ್ಟು, ಒಟ್ಟಾರೆ ಅದರದು 'ನೀರ ಹನಿ'ಯ ಆಕಾರ (ಚಿತ್ರ2). ಕಾಂತ ಗೋಳದ ಮಹತ್ವ ಏನೆಂದರೆ ಅದು ಭೂ ಸ್ವಾಸ್ಥ್ಯದ ಉಳಿವಿಗೆ ಅತ್ಯವಶ್ಯ; ಭೂ ಜೀವಜಾಲದ ಅಸ್ತಿತ್ವಕ್ಕೆ ಅನಿವಾರ್ಯ. ಏಕೆಂದು ನೀವೇ ನೋಡಿ:

- ನಮ್ಮ ಸೂರ್ಯನಿಂದ ಭಾರೀ ಪ್ರಮಾಣದ ಸೌರದ್ರವ್ಯ ಅವಿರತವಾಗಿ ಬಿರುಗಾಳಿಯಂತೆ ಬೀಸಿ ಬರುತ್ತಲೇ ಇದೆ; ಧರೆಯತ್ತಲೂ ಹರಿದು ಬರುತ್ತಿದೆ (ಚಿತ್ರ1). ಒಂದು ದಶಲಕ್ಷ ಡಿಗ್ರಿ ಸೆಲ್ಸಿಯಸ್ ತಾಪದಲ್ಲಿದ್ದು ಪ್ರತಿ ಸೆಕೆಂಡ್ ಗೆ 800 ಕಿ.ಮೀ ವೇಗದಲ್ಲಿ ಎರಗುತ್ತಿರುವ ಈ ದ್ರವ್ಯದಲ್ಲಿ ಇರುವುದೆಲ್ಲ ವಿದ್ಯುದಾವಿಷ್ಟ ಕಣಗಳಾದ ಎಲೆಕ್ಟ್ರಾನ್, ಪ್ರೋಟಾನ್, ಆಲ್ಫಾ ಕಣಗಳು, ಅಯಾನುಗಳು ಹಾಗೂ ಇಂಗಾಲ, ಸಾರಜನಕ, ಆಮ್ಲಜನಕ, ಮೆಗ್ನೀಷಿಯಂ, ಕಬ್ಬಿಣ ಇತ್ಯಾದಿ ಧಾತುಗಳ ಪರಮಾಣು ಬೀಜಗಳು. ಪ್ರತಿ ಸೆಕೆಂಡ್‌ನಲ್ಲೂ ಲಕ್ಷಾಂತರ ಕೋಟಿ ಸಂಖ್ಯೆಯಲ್ಲಿ ಅಪ್ಪಳಿಸಲು ಬರುತ್ತಿರುವ ಈ ಕಣಗಳು ಜೀವಿಗಳಿಗೆ ಅತ್ಯಂತ ಅಪಾಯಕಾರಿ; ಕೃತಕ ಉಪಗ್ರಹಗಳಿಗೆ ವಿನಾಶಕಾರಿ. ಕಾಂತಗೋಳ ಈ ಕಣ ಪ್ರವಾಹವನ್ನು ಅಂತರಿಕ್ಷದಲ್ಲೇ ವಿಕರ್ಷಿಸಿ, ದೂರ ಕಳಿಸಿ ಧರೆಯನ್ನು ರಕ್ಷಿಸುತ್ತಿದೆ.




- ಕಾಂತ ಗೋಳ ಧರೆಯ ವಾಯುಮಂಡಲದ ಸಂರಕ್ಷಕ ಕೂಡ. ಏಕೆಂದರೆ, ಕಾಂತಗೋಳ ಇಲ್ಲದಿದ್ದರೆ ಸೌರಕಣಗಳ ಮಹಾಪೂರ ಭೂ ವಾಯುಮಂಡಲದಲ್ಲಿರುವ ಎಲ್ಲ ಅನಿಲಗಳು ಮತ್ತಿತರ ದ್ರವ್ಯಗಳನ್ನೂ ಅನತಿ ಕಾಲದಲ್ಲೇ ಭೂಮಿಯಿಂದಾಚೆಗೆ 'ಗುಡಿಸಿ ಹಾಕುತ್ತದೆ'! ವಾಯುಮಂಡಲವೇ ಇಲ್ಲದ ಭೂಮಿ ಜೀವರಹಿತ, ಜಲರಹಿತ ಬರಡು ಬಂಡೆಯಾಗುತ್ತದೆ ತಾನೇ?
- ಭೂ ಕಾಂತ ಗೋಳದ, ಕಾಂತ ಕ್ಷೇತ್ರದ ನೆರವಿನಿಂದಲೇ ವಿಮಾನಗಳು ಮತ್ತು ಹಡಗುಗಳು ವಿಧ ವಿಧ 'ದಿಕ್ಸೂಚಿ'ಗಳನ್ನು ಬಳಸಿ ತಮ್ಮ ಪಯಣದ ಹಾದಿಯನ್ನು ಗುರುತಿಸಿಕೊಳ್ಳುತ್ತಿವೆ. ಆಕಾಶದಲ್ಲಿ ಮತ್ತು ಕಡಲಿನಾವಾರದಲ್ಲಿ ಪ್ರತಿವರ್ಷ ಸಾವಿರಾರು ಕಿಲೋಮೀಟರ್ ದೂರದ ಯಾನವನ್ನು ಕೈಗೊಳ್ಳುವ ವಲಸೆಗಾರ ಹಕ್ಕಿಗಳು, ಕಡಲಾಮೆಗಳು ಇತ್ಯಾದಿ ಪ್ರಾಣಿಗಳು ಭೂ ಕಾಂತಕ್ಷೇತ್ರವನ್ನು ಅವಲಂಬಿಸಿಯೂ ತಮ್ಮ ದಾರಿಯನ್ನು ನಿಖರವಾಗಿ ಅರಿಯುತ್ತವೆ!

■ ಎನ್. ವಾಸುದೇವ್